# ಆಧುನಿಕ ಜೀವನದಲ್ಲಿ ಹೊಸ ಸವಾಲುಗಳಿಗೆ ಗೃಹಸ್ಥ ಜೀವನವೇ ಪರಿಹಾರ

**ಎಸ್.ಎಸ್.ರಮೇಶ್**

ಇತ್ತೀಚಿನ ದಿನಗಳಲ್ಲಿ ಆಧುನಿಕ ತಂತ್ರಜ್ಞಾನ, ಮಾಧ್ಯಮಗಳು ಹಾಗೂ ಜಾಗತೀಕರಣದ ಪ್ರಭಾವ ಇವುಗಳಿಂದ ಜನಸಾಮಾನ್ಯರಲ್ಲಿ ಈ ನೆಲದ ಬೇರಾಗಿರುವ ಆಧ್ಯಾತ್ಮಿಕ ಪರಂಪರೆ, ನೈತಿಕ ಜೀವನ, ಧರ್ಮಶ್ರದ್ಧೆ ಇವುಗಳು ಮರೆಯಾಗಿ, ಸುಖ-ಸವಲತ್ತುಗಳಿಂದ ಕೂಡಿದ ಲೌಕಿಕ-ವ್ಯಾವಹಾರಿಕ ಜೀವನವೇ ಮಹತ್ವದ್ದೆನಿಸಿದೆ; ಆದರಿಂದ ಹಲವರಲ್ಲಿ ಶಾಂತಿ, ನೆಮ್ಮದಿ, ಸಹಬಾಳ್ವೆಯ ಆನಂದ ಇಲ್ಲದಾಗಿದೆ. ಇದಕ್ಕೆ ಪರಿಹಾರ ಅಧ್ಯಾತ್ಮಕೇಂದ್ರಿತ ಗೃಹಸ್ಥ ಜೀವನ— ಈ ವಿಷಯವನ್ನು ಕುರಿತು ಇಲ್ಲಿ ಬರೆದಿರುವ ಲೇಖಕರು ಮೈಸೂರು ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿದ್ದಾರೆ.

ಆಧುನಿಕ ಜೀವನದಲ್ಲಿ ಗೃಹಸ್ಥ, ಪ್ರಭಾವಗಳ ಪ್ರವಾಹದಲ್ಲಿ ತಾನು ಸಮರ್ಥವಾಗಿ ಈಜಿ, ತನ್ನ ಕುಟುಂಬದ ಸದಸ್ಯರನ್ನು ತನ್ನೊಡನೆ ಕರೆದುಕೊಂಡು ಹೋಗುವುದು ನಿಜವಾಗಿಯೂ ಒಂದು ದೊಡ್ಡ ಸಾಧನೆಯೇ ಸರಿ. ಎಲೆಕ್ಟ್ರಾನಿಕ್ ಮಾಧ್ಯಮಗಳು ನಮ್ಮ ಆಲೋಚನೆಗಳ ಮೇಲೆ ಮಾತ್ರವಲ್ಲ, ಆಲೋಚನಾ ಕ್ರಮಗಳ ಮೇಲೆಯೇ ಬೀರುತ್ತಿರುವ ಪ್ರಭಾವ ಅನೂಹ್ಯ ವಾದುದು. ಸಮಾಜದ ಸಿದ್ಧಮಾದರಿಗಳನ್ನು ನೋಡಿದಾಗ, ವ್ಯಕ್ತಿಯ ತನ್ನತನ ಎಲ್ಲಿ ಮಾಯವಾಗಿದೆಯೆಂದು ಪ್ರಜ್ಞಾವಂತ ರಿಗೆ, ಅನ್ನಿಸಿದರೆ ಆಶ್ಚರ್ಯವಾಗುವುದಿಲ್ಲ.

ಆಧುನಿಕ ಕುಟುಂಬವೆಂದರೆ ಗಂಡ, ಹೆಂಡತಿ ಮಗ ಅಥವಾ ಮಗಳು(ಅಪರೂಪವಾಗಿ ಮಕ್ಕಳು). ವೃದ್ಧರಾದ ತಾಯಿ-ತಂದೆ ಯರನ್ನು ಮಕ್ಕಳು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆಂದರೆ, ಅದು ಅಪರೂಪದ ಸಂಗತಿಯಾಗುತ್ತದೆ. ನಗರೀಕರಣ, ದೊಡ್ಡ ಮಟ್ಟ ದಲ್ಲಿ ಅಪಾಯ ಉಂಟುಮಾಡುತ್ತಿರುವುದು, ಮಾನವ ಸಂಬಂಧ ಗಳ ಮೇಲೆ. ವ್ಯಕ್ತಿ ತನ್ನ ಹತ್ತಿರದ ಬಂಧುಗಳಿಂದ ದೂರವಿರಲು ನಿರಂತರವಾಗಿ ಪ್ರಯತ್ನ ಪಡುತ್ತಿರುತ್ತಾನೆ. ಸಹಜವಾದ ಸಂಬಂಧ ಗಳಿಗಿಂತ ಕೃತಕ ಸಂಬಂಧಗಳು ಪ್ರಾಮುಖ್ಯತೆ ಪಡೆಯುತ್ತಿರು ವುದು, ಒಪ್ಪಿಕೊಳ್ಳಬೇಕಾದ ಕಹಿಸತ್ಯವಾಗಿದೆ.

ಗಣಕಯಂತ್ರ, ದೂರದರ್ಶನ, ಮೊಬೈಲ್ ಫೋನ್‌ಗಳ ನಡುವೆ ಸದಾ ಇರಲು ಬಯಸುವ ಆಧುನಿಕ ಮಾನವ, ಕೆಲ ಹೊತ್ತು ಇವುಗಳಿಂದ ದೂರವಿರುವ ಸಂದರ್ಭ ಬಂದಾಗ, ನೀರಿ ನಿಂದ ಹೊರಬಂದ ಮೀನು ಚಡಪಡಿಸಿದಂತೆ ಒದ್ದಾಡುತ್ತಾನೆ. ಆಧುನಿಕ ಜೀವನದಲ್ಲಿ ಸಾಕಷ್ಟು ಅವಕಾಶಗಳಿವೆ. ಆಯ್ಕೆ ಮಾಡುವ ಸವಾಲು ಸುಲಭವಲ್ಲ, ವಿವೇಕ ದೊಡ್ಡನಿಧಿ.

ವ್ಯಕ್ತಿ ತನ್ನ ವಿದ್ಯಾಭ್ಯಾಸ (ಕಾಲೇಜು ಶಿಕ್ಷಣ) ಮುಗಿಸಿ ಉದ್ಯೋಗಿಯಾದ ಮೇಲೆ ಅಂದರೆ ಆರ್ಥಿಕವಾಗಿ ಸ್ವತಂತ್ರನಾದ ಮೇಲೆ, ಅವನ ಮುಂದೆ ವಿವಾಹಿತನಾಗುವುದೆ ಅಥವಾ ಅವಿವಾ ಹಿತನಾಗಿಯೇ ಉಳಿಯುವುದೆ ಎಂಬ ಮುಂದಿನ ಜೀವನಕ್ಕೆ ಸಂಬಂಧಪಟ್ಟ ಪ್ರಶ್ನೆ ಎದುರಾಗುತ್ತದೆ. ಕೆಲವು ಸಂದರ್ಭಗಳಲ್ಲಿ ವೇಳಾಪಟ್ಟಿಯಲ್ಲಿ ನಮೂದಿಸಿದಂತೆ ಕೆಲವರು ವಿವಾಹ ಬಂಧನಕ್ಕೆ ಒಳಪಡುತ್ತಾರೆ. ಮೊದಲು ಗೃಹಸ್ಥಧರ್ಮ ಮತ್ತು ಸಂನ್ಯಾಸ ಎಂಬ ಎರಡು ಮುಖ್ಯ ದಾರಿಗಳಿದ್ದವು. ಈ ಬಗ್ಗೆ ಶ್ರೀರಾಮಕೃಷ್ಣ ಪರಮಹಂಸರ ಮಾತು ಚಿಂತನಾರ್ಹವಾದುದು:

''ಪ್ರಾಪಂಚಿಕ ಜೀವನದಲ್ಲಿದ್ದುಕೊಂಡು ಜೀವನ ನಡೆಸು ವುದು ಕೋಟೆಯಲ್ಲಿದ್ದುಕೊಂಡು ಯುದ್ಧ ಮಾಡುವಂತೆ. ಸಂನ್ಯಾಸಿ ಗಳದು ಕೋಟೆಯ ಹೊರಗಡೆ ಇದ್ದು ಯುದ್ಧಮಾಡುವಂತೆ''. ಯುದ್ಧದಿಂದ, ಜೀವನ ಹೋರಾಟದಿಂದ ಯಾರಿಗೂ ಪಲಾ ಯನ ಸಾಧ್ಯವಿಲ್ಲ. ಸಂನ್ಯಾಸ ಆಯ್ಕೆ ಮಾಡಿಕೊಂಡವರು ಆತ್ಮ ಸಂಯಮದಿಂದ ಎಚ್ಚರಿಕೆಯಿಂದ ನಡೆಯಬೇಕಾಗುವುದು.

ವ್ಯಕ್ತಿ ವಿವಾಹ ಬಂಧನಕ್ಕೆ ಒಳಪಟ್ಟ ಮೇಲೆ ಎಂದು ಹೇಳುವ ಬದಲು, ವ್ಯಕ್ತಿ ಗೃಹಸ್ಥಧರ್ಮವನ್ನು ಒಪ್ಪಿ ಪವಿತ್ರವಾದ ಜವಾ ಬ್ದಾರಿಗಳನ್ನು ನಿರ್ವಹಿಸಲು ಮುಂದಾದವ ಎಂದು ಹೇಳುವುದು ಸೂಕ್ತ. ನಮ್ಮ ಸುತ್ತಲಿನ ಸಮಾಜದಲ್ಲಿ ಕಂಡುಬರುತ್ತಿರುವ ಹಾಗೂ ಸಾಮಾನ್ಯವಾಗುತ್ತಿರುವ ಒಂದು ಸಂಗತಿಯೆಂದರೆ, ಯುವಕ, ಯುವತಿಯರು ಆರ್ಥಿಕವಾಗಿ ಸದೃಢವಾಗಿದ್ದರೂ ಗೃಹಸ್ಥಧರ್ಮ ಸ್ವೀಕರಿಸಲು ಹಿಂಜರಿಯುತ್ತಿರುವುದು. ಯಥೇಚ್ಛ ಹಣ ಇಲ್ಲದಿದ್ದರೆ ಸಂಸಾರ ನಿರ್ವಹಣೆ ಕಷ್ಟಕರವಾದುದು ಎಂಬ ಭಾವನೆ-ಅವರಲ್ಲಿ ಗಟ್ಟಿಯಾಗಿ ಕುಳಿತುಬಿಟ್ಟಿದೆ. ಗ್ರಾಹಕ ಮನೋ ಭಾವ ಮತ್ತು ಕೊಳ್ಳುಬಾಕತನ ಇವು ಸರಳ ಜೀವನದ ವೈರಿಗಳು. ಅಪಾರ ಸಂಪತ್ತು ಇದ್ದರೂ ವಿವಾಹ ವಿಚ್ಛೇದನಗಳು ಹೆಚ್ಚಲು ಕಾರಣವೇನು ಎಂಬ ಪ್ರಶ್ನೆಯನ್ನು ಹಾಕಿಕೊಳ್ಳಬೇಕು. ದುಬಾರಿ ಕಾಲದಲ್ಲಿ ದೈನಂದಿನ ನಿರ್ವಹಣೆಗೆ, ಒಂದು ಮಟ್ಟದ ಜೀವನ ಶೈಲಿಗೆ ಖಂಡಿತವಾಗಿ ಹಣ ಅಗತ್ಯವಾಗಿ ಬೇಕು. ದಾಂಪತ್ಯ ನಿಜ ವಾದ ಅರ್ಥದಲ್ಲಿ ಸಾರ್ಥಕ ಸಂಬಂಧವಾಗಬೇಕಾದರೆ, ನಂಬಿಕೆ, ಭಾವನಾತ್ಮಕ ಸಹಕಾರ, ಪರಸ್ಪರ ಪ್ರೀತಿ ಮತ್ತು ಅರಿತು ನಡೆಯು ವುದು ಅಗತ್ಯವಾಗಿ ಇರಲೇಬೇಕು.

ತುಂಬಾ ಹಳೆಯ ಕಾಲದ ಮಾತು ಬೇಡ. ಕೇವಲ ೩೦-೪೦ ವರ್ಷಗಳ ಹಿಂದಿನ ಜೀವನ ಕ್ರಮದೊಡನೆ ಸದ್ಯದ ಜೀವನ ವಿಧಾನ ಹೋಲಿಸಿ ನೋಡಿದರೆ ಸ್ಪಷ್ಟ ವ್ಯತ್ಯಾಸ ತಿಳಿಯುವುದು.

ವೇಗ, ಆತಂಕ, ವ್ಯವಧಾನವಿಲ್ಲದ ಯಾಂತ್ರಿಕ ಬದುಕು ಇವುಗಳಿಂದ ಅಸಹನೆ, ಅಶಾಂತಿ ಹೆಚ್ಚಾಗುತ್ತಿರುವುದು.

ಈ ರೀತಿ ಜೀವನದಿಂದ ಕೆಲವು ವರ್ಷಗಳಾದ ಮೇಲೆ ವ್ಯಕ್ತಿಯ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಅವನ ಕೌಟುಂಬಿಕ ಸಂಬಂಧಗಳು ದುರ್ಬಲವಾಗುವುದರಲ್ಲಿ ಯಾವ ಸಂದೇಹವಿಲ್ಲ. ಯಂತ್ರ ಹಾಗೂ ಪ್ರಾಣಿಗಳಿಗಿಂತ ಮಾನವ ಭಿನ್ನ ಎಂಬುದನ್ನು ನೆನಪಿಸಬೇಕಾಗುತ್ತದೆ.

ವ್ಯಕ್ತಿ, ಗೃಹಸ್ಥಜೀವನ, ಸಂನ್ಯಾಸ ಧರ್ಮ, ಅವಿವಾಹಿತನಾಗಿ ಉಳಿಯುವ ನಿರ್ಧಾರ ಯಾವ ನಿರ್ಧಾರ ತೆಗೆದುಕೊಂಡರೂ ಕೆಲ ಮೂಲ ಸಮಸ್ಯೆಗಳಿಂದ ಪಲಾಯನ ಮಾಡಲಾರ. ಸ್ವಾಮಿ ವಿವೇಕಾನಂದರು ಜೀವನದ ಬಗ್ಗೆ ಕೊಟ್ಟಿರುವ ವ್ಯಾಖ್ಯಾನ ಅರ್ಥಪೂರ್ಣವಾಗಿದೆ: ''ಜೀವನವೆಂದರೆ ಒಂದು ಜೀವಿಯು ವಿರುದ್ಧ ಸನ್ನಿವೇಶಗಳನ್ನು ಎದುರಿಸುತ್ತಾ ತನ್ನನ್ನು ಅಭಿವ್ಯಕ್ತಿಗೊಳಿಸುವುದು ಮತ್ತು ಬೆಳವಣಿಗೆ ಹೊಂದುವುದು.'' (Life is unfoldment and development of a being under circumstan -ces tending to press it down) ಸ್ವಾಮೀಜಿಯವರು ಸುಸ್ಪಷ್ಟವಾಗಿ ಹೇಳುವುದು ಜೀವನವೆಂದರೆ ನಿರಂತರ ಹೋರಾಟ. ಗೃಹಸ್ಥ ಧರ್ಮ ನಡೆಸುತ್ತಿರುವವರು ತಮ್ಮ ಸ್ವಂತ ಜೀವನಕ್ಕಾಗಿ ಹೋರಾಡುವ ಜೊತೆಗೆ ತಮ್ಮನ್ನು ಅವಲಂಬಿಸಿದವರಿಗಾಗಿಯೂ ಹೋರಾಡುತ್ತಿರಬೇಕು. ಹೀಗೆಂದಾಗ ಕುಟುಂಬದ ಇತರ ಸದಸ್ಯರಿಗೆ ಸ್ವಂತ ವ್ಯಕ್ತಿತ್ವ ಇಲ್ಲ, ಹಾಗೂ ಪರಾವಲಂಬಿಗಳು ಎಂದು ಅರ್ಥಮಾಡಿಕೊಳ್ಳಬಾರದು. ಕುಟುಂಬದ ಮುಖ್ಯಸ್ಥನಿಗೆ, ಹೆಚ್ಚು ಜವಾಬ್ದಾರಿಗಳು ಸಹಜವಾಗಿಯೇ ಇರುತ್ತವೆ. ಸ್ವಾರ್ಥರಹಿತ, ಸಂಯಮ, ನೈಜ ಪ್ರೀತಿ ಇವು ಗೃಹಸ್ಥನಲ್ಲಿ ಅಪೇಕ್ಷಿತ ಗುಣಗಳು.

ಗೃಹಸ್ಥನಾದವನು ಸಂಯಮದಿಂದ ಹೆಂಡತಿ ಮಕ್ಕಳ ನಿರೀಕ್ಷೆಗಳನ್ನು ಅರ್ಥಮಾಡಿಕೊಂಡು ಸಂತೋಷದಿಂದ ಈಡೇರಿಸಲು ಮುಂದಾಗಬೇಕು. ನಗರೀಕರಣ ಜೀವನ ಹೊಸ ಸವಾಲುಗಳನ್ನು ನಿಭಾಯಿಸಲು ಸೂಕ್ತವಾದುದು ಮತ್ತು ಸುರಕ್ಷಿತವಾದುದು ಗೃಹಸ್ಥ ಜೀವನವೇ ಅತ್ಯುತ್ತಮ ಪರಿಹಾರವೆಂದರೆ ಅದು ಸೀಮಿತ ದೃಷ್ಟಿಯಾಗುವುದಿಲ್ಲ.

ಗೃಹಸ್ಥ ಜೀವನಕ್ಕೆ ಪ್ರವೇಶ ಮಾಡದಿರುವುದು ಅಥವಾ ಕೆಲವ ವರ್ಷಗಳು ಗೃಹಸ್ಥ ಜೀವನ ನಡೆಸಿ ಸಾಕಾಗಿ ಒಂಟಿಯಾಗಿ ಬದುಕು ದೂಡುತ್ತಿರುವವರ ಜೀವನ ಶೈಲಿ ನೋಡಿದಾಗ ನಮಗೆ ಈ ಆಧುನಿಕ ಜೀವನದಲ್ಲಿ ಹೊಸ ಸವಾಲುಗಳಿಗೆ ಗೃಹಸ್ಥ ಜೀವನವೇ ಪರಿಹಾರ ಎಂಬುದು ಮನವರಿಕೆಯಾಗುವುದು.

ಕುಟುಂಬದಲ್ಲಿ ವಿಭಿನ್ನ ಮನೋಭಾವದ ವ್ಯಕ್ತಿಗಳಿರುತ್ತಾರೆ. ಹಠಕ್ಕಿಂತ ತ್ಯಾಗ, ಜಗಳಕ್ಕಿಂತ ಆತ್ಮೀಯತೆ, ಹರಿತವಾದ ಮಾತುಗಳಿಗಿಂತ ಆಪ್ತ ಮಾತುಗಳು ಇವು ಕುಟುಂಬ ಸದಸ್ಯರ ನಡುವಿನ ಭಾವನಾತ್ಮಕ ಸಂಬಂಧಗಳನ್ನು ಗಟ್ಟಿಗೊಳಿಸುವುದು. ಪರಸ್ಪರ ಆಸರೆ ದೃಢವಾಗಿದ್ದರೆ, ನೈಜವಾದ ಪ್ರೀತಿ ವಾತ್ಸಲ್ಯ ಕುಟುಂಬದಲ್ಲಿ ಸ್ಥಿರವಾಗಿದ್ದರೆ, ಯಾವ ರೀತಿಯ ಕಷ್ಟಗಳನ್ನಾದರೂ ಎದುರಿಸಬಹುದು. ಹಾಗೆ ನೋಡಿದರೆ ಸಂತೋಷದ ಸನ್ನಿವೇಶಗಳಿಗಿಂತ ಸಂಕಷ್ಟಗಳು ಕುಟುಂಬದ ಸದಸ್ಯರ ನಡುವಿನ ಸಂಬಂಧವನ್ನು ದೃಢಗೊಳಿಸಲು ಸಹಾಯ ಮಾಡುತ್ತವೆ.

ಆರ್ಥಿಕ ಕುಸಿತ, ನಿರುದ್ಯೋಗ, ಗಂಭೀರವಾದ ವ್ಯಾಧಿಗಳು, ಹೊರಗಿನ ಸಮಾಜದಲ್ಲಿ ತೀವ್ರವಾದ ಸ್ಪರ್ಧೆ, ನಿಶ್ಚಿತ ವರಮಾನವಿಲ್ಲದಿರುವುದು, ಹೊರಗಿನವರಿಂದ ಉಂಟಾಗುವ ಅನಪೇಕ್ಷಿತ ತೊಂದರೆಗಳು.... ಇವೇ ಮುಂತಾದವು ಆಧುನಿಕ ಕುಟುಂಬಗಳು ಎದುರಿಸುವ ಸಮಸ್ಯೆಗಳು.

ಗೃಹಸ್ಥನಿಗೆ, ಸಂಸಾರ ನಿರ್ವಹಣೆಗೆ, ಕುಟುಂಬದ ಸದಸ್ಯರ ಪ್ರೀತಿಯ ಜವಾಬ್ದಾರಿಯ ಸಹಕಾರ ಲಭಿಸಿದರೆ ಆ ಗೃಹಸ್ಥ ನಿಜವಾಗಿಯೂ ಭಾಗ್ಯಶಾಲಿಯೇ ಸರಿ. ಆಧುನಿಕ ಸಮಾಜದಲ್ಲಿ ಬದಲಾದ ಆರ್ಥಿಕತೆಯ ನೀತಿಯಿಂದ, ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರದಲ್ಲಿ ಉಂಟಾಗುತ್ತಿರುವ ಕ್ಷಿಪ್ರ ಬೆಳವಣಿಗೆಯಿಂದ ಮಾನವ ಸಂಬಂಧಗಳಲ್ಲಿ ಮಹತ್ತರವಾದ ಬದಲಾವಣೆ ಉಂಟಾಗುತ್ತಿದೆ. ಕೌಟುಂಬಿಕ ಪರಿಸರದಲ್ಲೂ ಉಂಟಾಗುತ್ತಿರುವ ಬದಲಾವಣೆ ಸುಸ್ಪಷ್ಟವಾಗಿ ಗೋಚರಿಸುತ್ತದೆ. ಗೃಹಸ್ಥ ಇಂತಹ ಸನ್ನಿವೇಶದಲ್ಲಿ ತನ್ನ ಕುಟುಂಬದ ಸದಸ್ಯರೊಡನೆ ವಿಶ್ವಾಸದಿಂದ ವಿವೇಕದಿಂದ ವರ್ತಿಸಬೇಕಾಗುವುದು. ಪ್ರತಿಯೊಬ್ಬನ ಆಲೋಚನೆ ಅಭಿವ್ಯಕ್ತಿ , ಆಶಯಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗುವುದು. ಮನೆಯ ಯಜಮಾನ ಎಂಬ ಪದವೇ ಅರ್ಥ ಕಳೆದುಕೊಳ್ಳುತ್ತಿದೆ. ಗೃಹಸ್ಥ ಸಹನೆ ಕಳೆದುಕೊಂಡರೆ, ಕೋಪಾವೇಶದಿಂದ ನಡೆದುಕೊಂಡರೆ, ತಾನು ಹೇಳಿದ್ದೆ ಆಗಬೇಕೆಂದು ಹಠ ಹಿಡಿದರೆ, ಕುಟುಂಬ ಛಿದ್ರವಾದರೆ ಆಶ್ಚರ್ಯವಿಲ್ಲ. ತನ್ನತನ ಬಿಟ್ಟು ಇತರರು ಹೇಳಿದಂತೆ ಮೌನವಾಗಿ ಕೇಳಿ ಕುರಿಯಂತೆ ಇರಲೂ ಸಾಧ್ಯವಿಲ್ಲ. ಸಂಸಾರ ಸಾಗರದ ಸ್ಥಿತಿಯನ್ನು ಬಸವಣ್ಣನವರ ಒಂದು ವಚನ ಸೊಗಸಾಗಿ ಹೇಳುತ್ತದೆ:

**ಕಾಲಿಗೆ ಕಟ್ಟಿದ ಗುಂಡು ಕೊರಳಲಿ ಕಟ್ಟಿದ ಬೆಂಡು**<br>
**ತೇಲಲೀಯದು ಗುಂಡು, ಮುಳುಗಲೀಯದು ಬೆಂಡು**<br>
**ಇಂತಪ್ಪ ಸಂಸಾರ ಶರಧಿಯ ದಾಂಟಿಸಿ**<br>
**ಕಾಲಾಂತಕನೇ ಕಾಯೋ ಕೂಡಲಸಂಗಯ್ಯಾ**

ಸಮಾಜದಲ್ಲಿ ಸಮಸ್ಯೆಗಳು ಹೆಚ್ಚಾಗಲು, ದೇಶದಲ್ಲಿ ಅಪರಾಧಗಳು ಹಾಗೂ ಆತ್ಮಹತ್ಯೆಗಳು ಅಧಿಕವಾಗಲು ಸಾಮರಸ್ಯವಿಲ್ಲದ ಕುಟುಂಬಗಳು ನೇರವಾದ ಕಾರಣವೆಂದರೆ ಉತ್ಪ್ರೇಕ್ಷೆಯ ಮಾತಾಗುವುದಿಲ್ಲ.

ಆಧುನಿಕ ಜೀವನದಲ್ಲಿ ಹೊಸ ಸವಾಲುಗಳಿಗೆ ಗೃಹಸ್ಥ ಜೀವನವೇ ಪರಿಹಾರ. ಆಧುನಿಕ ಸಮಾಜದಲ್ಲಿ ಜಾಗತೀಕರಣದ ಪ್ರಭಾವದಿಂದ, ಹಲವರು ಭೋಗ ವಸ್ತುಗಳ ಹಿಂದೆ ಬಿದ್ದಿದ್ದಾರೆ.

ಅತಿಯಾದ ವಿಷಯಾಸಕ್ತಿಯನ್ನು ವಿವೇಕ ವೈರಾಗ್ಯಗಳಿಂದ ನಿಯಂತ್ರಣದಲ್ಲಿ ಇಟ್ಟುಕೊಳ್ಳದಿದ್ದರೆ ಅವನತಿ ಶತಸ್ಸಿದ್ಧ. ಪ್ರತಿ ಕುಟುಂಬದಲ್ಲೂ ಎಲ್ಲಾ ಸದಸ್ಯರು ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಪ್ರಾರ್ಥನೆ, ಧ್ಯಾನಗಳಿಗೆ ಸಮಯ ನಿಗದಿಪಡಿಲೇಬೇಕು. ಗೃಹಸ್ಥನಾದವನು ತನ್ನ ಕುಟುಂಬದ ಎಲ್ಲಾ ಸದಸ್ಯರನ್ನು ಧಾರ್ಮಿಕ, ಆಚಾರ ವಿಚಾರಗಳಿಗೆ ಪ್ರೇರೇಪಿಸುವಂಥಹ ಸಾತ್ವಿಕ ವ್ಯಕ್ತಿತ್ವವನ್ನು ಹೊಂದಿರಬೇಕು. ಯಾವ ವ್ಯಕ್ತಿಯೇ ಆಗಲಿ ಅತಿಯಾದ ವಿಷಯಾಸಕ್ತಿಯಿಂದ ಭೋಗದಲ್ಲಿ ಮುಳುಗಿದರೆ ಸಂಕಷ್ಟದ ಸುಳಿಯಲ್ಲಿ ಸಿಕ್ಕಿ ಹಾಳಾಗುತ್ತಾನೆ. ಸಮಾಜದ ಯಾವ ವ್ಯಕ್ತಿಯೇ ಆಗಲಿ ಅವನ ಈ ಲೋಕದ ಬದುಕು ಸಾರ್ಥಕವಾಗಬೇಕಾದರೆ ಸ್ವಾಮಿ ವಿವೇಕಾನಂದರು ಕೊಟ್ಟಿರುವ ಶ್ರೇಷ್ಠವಾದ ಮಂತ್ರ ಮನನ ಮಾಡಬೇಕು: **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** (ಸ್ವಂತ ಮುಕ್ತಿಗಾಗಿ ಸಾಧನೆ ಮಾಡುವುದರ ಜೊತೆ ಜೊತೆಗೆ ಜಗತ್ತಿನ ಹಿತಕ್ಕಾಗಿಯೂ ದುಡಿಯಬೇಕು.)

ಸಾಮಾನ್ಯವಾದ ಗ್ರಹಿಕೆ, ಗೃಹಸ್ಥ ಜೀವನ ನಿರಂತರವಾಗಿ ಸಮಸ್ಯೆಗಳನ್ನು ಎದುರಿಸುತ್ತಲೇ ಇರಬೇಕು. ಗೃಹಸ್ಥನಾದವನು ತನ್ನ ವೈಯಕ್ತಿಕ ಜೀವನವನ್ನು ಪೂರ್ಣವಾಗಿ ಮರೆತು, ಕುಟುಂಬದ ಸದಸ್ಯರ ಬೇಡಿಕೆಗಳನ್ನು ಪೂರೈಸುವುದರಲ್ಲಿಯೇ ಮಗ್ನನಾಗಿರಬೇಕು. ಇಷ್ಟಾಗಿಯೂ ಕುಟುಂಬದ ಸದಸ್ಯರು ಸಣ್ಣ ಸಣ್ಣ ಅನಾನುಕೂಲಗಳಿಗೆ ಕುಟುಂಬದ ಮುಖ್ಯಸ್ಥನನ್ನೇ ದೂರುತ್ತಾರೆ. ನಾವು ದೈನಂದಿನ ಜೀವನದಲ್ಲಿ ಕೆಲ ಗೃಹಸ್ಥರನ್ನು, ನೋಡಿದಾಗ ಚಿಂತೆಯ ಮೂಟೆ ಹೊತ್ತು ಕಾಲು ಎಳೆಯುತ್ತಿದ್ದಾರೆ ಎಂಬ ಭಾವನೆ ಬರುವುದು. ಶ್ರೀರಾಮಕೃಷ್ಣರ ದಿವ್ಯ ಸಂದೇಶ ಹೀಗಿದೆ: ''ದೋಣಿ ನೀರಿನೊಳಗೇ ಇರಲಿ. ಆದರೆ, ದೋಣಿಯೊಳಗೆ ನೀರು ಪ್ರವೇಶಿಸುವುದು ಬೇಡ.''

ಬದಲಾದ ಸಾಮಾಜಿಕ ವ್ಯವಸ್ಥೆಯಲ್ಲಿ, ಆತಂಕ, ಗೃಹಸ್ಥ ಜೀವನದ ಅವಿಭಾಜ್ಯ ಭಾಗವಾಗಿದೆ. ಹಣ, ಸ್ಥಾನಮಾನಗಳು ಅತಿಯಾದ ಪ್ರಾಮುಖ್ಯತೆ ಪಡೆಯುತ್ತಿರುವುದರಿಂದ, ಗೃಹಸ್ಥನನ್ನು ಒಳಗೊಂಡಂತೆ ಕುಟುಂಬದ ಸದಸ್ಯರೆಲ್ಲರೂ ಭಾವೋದ್ವೇಗಗೊಳ್ಳುವುದು ಸಹಜ. ಮಕ್ಕಳ ಆದ್ಯತೆ, ಆದರ್ಶಗಳು ಹಿರಿಯರ ಜೀವನಾದರ್ಶಗಳಿಗಿಂತ ಭಿನ್ನವಾಗಿರುತ್ತದೆ. ಭಿನ್ನ ಅಭಿರುಚಿ ಭಿನ್ನ ದೃಷ್ಟಿ ತಪ್ಪಲ್ಲ. ಆದರೆ, ಇವು ಅತಿಯಾಗಿ ಗೃಹಭಂಗಕ್ಕೆ ಕಾರಣವಾಗಬಾರದು.

ಭಾವನಾತ್ಮಕವಾದ, ವ್ಯಾವಹಾರಿಕ ನಿರೀಕ್ಷೆಗಳಿಲ್ಲದ ಶುದ್ಧ ಪ್ರೀತಿ-ವಾತ್ಸಲ್ಯ ಒಬ್ಬ ವ್ಯಕ್ತಿಗೆ ಕೊಡುವ ಸ್ಫೂರ್ತಿ, ಶಕ್ತಿ ಅದಮ್ಯವಾದುದು. ಹಣ ಹಾಗೂ ಭೋಗವಸ್ತುಗಳ ಹಿಂದೆ ಬಿದ್ದಿರುವ ಆಧುನಿಕ ನಾಗರಿಕರಿಗೆ ತಮ್ಮ ಇಳಿಗಾಲದಲ್ಲಿ ಸತ್ಯ ಮನವರಿಕೆಯಾಗುತ್ತದೆ. ಅಷ್ಟುಹೊತ್ತಿಗೆ ಯಂತ್ರರೂಪದ ಸ್ವಂತಿಕೆ ಕಳೆದುಕೊಂಡಿರುವ ಮಾನವನು ಆರೋಗ್ಯ ಹಾಗೂ ಸಂಬಂಧಗಳನ್ನು ಕಳೆದುಕೊಂಡಿರುತ್ತಾನೆ; ಅವನು ಜೀವಂತ ಶವವೇ ಆಗಿರುತ್ತಾನೆ.

With best compliments from

**ASMET INDUSTRIES PRIVATE LIMITED**

**(An ISO 9001:2015 Company)**

**Plot No. 503, 4th Phase,**
**Peenya Industrial Area, Bangalore - 560058**

*Manufacture of heavy sheet metal fabrications, manufacture of silencers (mufflers), tanks, metal handling equipment, gear box case and other fabricating items for engineering petro chemicals and other allied industries.*

**Telephone no. 080-2836 2080 / 2836 7436**
**E-mail: asmetind@gmail.com**